MYSORE LEGISLATIVE ASSEMBLY

Friday, 4th February 1966.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Development of Malnad.

*Q.—7. SRI C. R. RANGE GOWDA (Magadi).—

Will the Government be pleased to state :—

(*a*) whether they have got any schemes for the development of Malnad ;

(*b*) if so, what are they ;

(*c*) whether they intend to implement them forthwith in the light of the National Emergency ?

*A.—SRI R. M. PATIL (Minister for Development, Panchayat Raj and Municipal Administration).—

(*a*) There are no separate or special schemes for the development of Malnad as such. All normal development schemes of agricultural minor irrigation, communications, fisheries, etc., are being implemented in the Malnad area as in the other areas.

(*b*) As above.

(*c*) All Schemes aimed at increasing agricultural production are being implemented on priority basis.

ಶ್ರೀ ಸಿ. ಆರ್. ರಂಗೇಗೌಡ.—(ಎ) ಪ್ರಶ್ನೆಗೆ ಉತ್ತರ ಮಲೆನಾಡಿನ ಅಭಿವೃದ್ಧಿಗಾಗಿಯೇ ಪ್ರತ್ಯೇಕ ಅಥವಾ ವಿಶೇಷ ಯೋಜನೆಗಳಾವುವೂ ಇರುವುದಿಲ್ಲ ಎಂದು ಹೇಳಿದೆ. ನಮ್ಮ ಮುಖ್ಯ ಮಂತ್ರಿಗಳು, ಪೂರ್ಣ ಸಭಾಪತಿಗಳವರು ಮಲೆನಾಡಿಗೆ ಬಂದು ಅಲ್ಲಿ ಸಂಚಾರಮಾಡಿದಾಗ ಸ್ವಂತಾಗಿ ನೋಡಿ ಕೆಲವು ಅಭಿವೃದ್ಧಿ ಯೋಜನೆಗಳನ್ನು ಸೂಚಿಸಿದ್ದಾರೆ. ಅವುಗಳನ್ನು ಯಾವಾಗ ಕಾರ್ಯರೂಪಕ್ಕೆ ತರುವುದು ?

ಶ್ರೀ ಆರ್. ಎಂ. ಪಾಟೀಲ್.—ಅದರ ಪರಿಣಾಮವಾಗಿಯೇ ಮಲೆನಾಡು ಪ್ರದೇಶದಲ್ಲಿ ಕ್ರಾಶ್ ಪ್ರೋಗ್ರಾಂ ತೆಗೆದುಕೊಂಡಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವ್ಯವಸಾಯ, ಸಣ್ಣ ನೀರಾವರಿ, ಸಂಪರ್ಕ, ಮೀನುಗಾರಿಕೆ ಮುಂತಾದ ಸಾಮಾನ್ಯ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಮಾಡಿದೆ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ. ಈ ವಿಚಾರದಲ್ಲಿ ಪೂಜ್ಯ ಸಭಾಪತಿಗಳಾದ ವೈಕುಂಠ ಬಾಳಿಗಾ ಅವರು ರಾಜ್ಯ ಸರಕಾರಕ್ಕೆ ಕೆಲವು ಸಲಹೆ ಸೂಚನೆಗಳನ್ನು ಮಾಡಿದ್ದಾರೆ ಎಂದು ಕಾಣುತ್ತದೆ. ಅವುಗಳನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ?

MR. SPEAKER.—Such doubtful matters which relate to me should not be brought in here.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಕ್ರಾಶ್ ಪ್ರೋಗ್ರಾಂ ತೆಗೆದುಕೊಂಡಿದೆ ಎಂದು ಉತ್ತರ ಹೇಳಿದರು. ಹಾಗಾದರೆ ಈ ಪ್ಲಾನುಗಳ ಡೀಟೇಲ್ಸ್ ಏನೇನು ಇದೆ ?

ಶ್ರೀ ಆರ್. ಎಂ. ಪಾಟೀಲ್.—ಆವಶ್ಯಕವಾದುದು ಯಾವುದು ಇತ್ತು ಅದನ್ನು ತೆಗೆದುಕೊಂಡಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಮಲೆನಾಡು ಅಭಿವೃದ್ಧಿಗಾಗಿ ಕೇಂದ್ರ ಸರಕಾರ ಹೆಚ್ಚು ಹಣ ಕೊಡುತ್ತಾರೆ ಎಂದು ತಿಳಿದು ಒಂದಿದೆ. ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕೆ ಹೆಚ್ಚಿನ ಹಣ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅದು ಗೊತ್ತಿದೆ. ಬೇಕಾದಷ್ಟು persuasion ನಡೆದಿದೆ. ಇನ್ನೂ ಪೂರ್ತಿಯಾಗಿ ಹಣ ಬಂದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಅಭಿವೃದ್ಧಿ ಯೋಜನೆಗಾಗಿ ಯಾವ ಕೆಲಸ ಈಗ ತೆಗೆದುಕೊಳ್ಳಲಾಗಿದೆ ?

ಶ್ರೀ ಆರ್. ಎಂ. ಪಾಟೀಲ್.—ರೋಡ್ ಸ್ಕೀಂ ಒಂದು ಇದೆ.

SRI SANJEEVANATH AIKALA.—Had any delegation from the World Bank visited Malnad ? Had this Government submitted any proposals and if so what are those proposals ?

ಶ್ರೀ ಆರ್. ಎಂ. ಪಾಟೀಲ್.—ಬೇರೆ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಲೆನಾಡು ಅಭಿವೃದ್ಧಿ ಪಡಿಸುವ ಯೋಜನೆ ಪರಿಶೀಲಿಸಲು ಕೇಂದ್ರದ ಸಚಿವರು, ರಾಜ್ಯಸರಕಾರದ ಸಚಿವರು, ಸ್ಪೀಕರ್ ಅವರು ಮತ್ತು ಕೆಲವರು ಮಲೆನಾಡಿನ ಮೇಲೆ ಹಾರಾಡಿ ಬಂದರು. ಆದು ಏನು ಆಯಿತು ?

ಅಧ್ಯಕ್ಷರು.—ಹಾಗೆ ಹಾರಾಡಿದರು ಅಂದರೆ ಏನು ? ಈ ರೀತಿ ಕೇಳುವುದು ಸರಿಯಲ್ಲ.

ಶ್ರೀ ಕೆ. ಲಕ್ಕಪ್ಪ.—ವ್ಯವಸಾಯ ಉತ್ಪತ್ತಿ ಹೆಚ್ಚು ಮಾಡುವ ಯೋಜನೆ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಈಗಾಗಲೇ ಎಲ್ಲೆಲ್ಲಿ ಆವಶ್ಯಕತೆ ಇದೆ ಅಲ್ಲಲ್ಲಿ ಪಂಪ್ ಸೆಟ್ಸ್ ಕೊಟ್ಟಿದ್ದು, ಸಾಧ್ಯ ಇರುವಕಡೆ ಮೈನರ್ ಇರಿಗೇಷನ್ ಸ್ಕ್ಯಾಂಕ್ಷನ್ ಮಾಡಿದೆ. ಈ ಕೆಲಸಗಳು ನಡೆಯತ್ತಾ ಇವೆ. ಇದು ಎಲ್ಲವೂ ಮಾನ್ಯ ಸದಸ್ಯರಿಗೆ ಗೊತ್ತಿದ್ದರೂ ಕೂಡ ಕೇಳುತ್ತಿದ್ದೀರಿ.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಮಲೆನಾಡು ಪ್ರದೇಶವು ವಿಶೇಷವಾಗಿ ಗುಡ್ಡಗಾಡು ಪ್ರದೇಶವಾಗಿದ್ದು ಅಲ್ಲಿ ಜನಜೀವನ ಕೂಡ ವ್ಯತ್ಯಾಸವಿರುವುದರಿಂದ ಮಲೆನಾಡು ಅಭಿವೃದ್ಧಿಗಾಗಿ ಏನಾದರೂ ಒಂದು ಪ್ರತ್ಯೇಕವಾದ ಕ್ರಮ ಕೈಕೊಳ್ಳುವ ಬಗ್ಗೆ ಸರಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಪ್ರಯತ್ನ ಮಾಡಬಹುದು.

ಶ್ರೀ ಸಿ. ಆರ್. ರಂಗೇಗೌಡ.—ಮಲೆನಾಡು ಅಭಿವೃದ್ಧಿ ಬೋರ್ಡು ರಚನೆಯಾಗಿತ್ತು. ಅದರ ಉದ್ದೇಶ ಕಾರ್ಯಗತವಾಯಿತೇ ?

ಶ್ರೀ ಆರ್. ಎಂ. ಪಾಟೀಲ್.—ಅದರ ಉದ್ದೇಶ ಏನೂ ಉಪಯೋಗವಾಗಲಿಲ್ಲ. ಆದುದರಿಂದ ಅದನ್ನು ತೆಗೆದು ಹಾಕಿ ಬಿಟ್ಟಿದೆ.

SRI SANJEEVANATH AIKALA.—Had any delegation from World Bank visited Malnad.

SRI R. M. PATIL.—Personally I do not know.

———